**ಎಚ್.ಕೆ. ಪಾಟೀಲ**
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ : 22258094
22033492
ಫ್ಯಾಕ್ಸ್: 22258094
ಕೊಠಡಿ ಸಂಖ್ಯೆ: 329
ವಿಧಾನ ಸೌಧ
ಬೆಂಗಳೂರು – 560 001

**ಸಂಖ್ಯೆ: ಗ್ರಾಪಂಸ/303 /2016-17** **ದಿನಾಂಕ: 23.05.2016**

**ಟಿಪ್ಪಣಿ**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಮುಖ್ಯ ವಾಹಿನಿಯ ಹೊರಗೆ ಹಲವಾರು ಬ್ಯಾಂಕ್ ಖಾತೆಗಳಲ್ಲಿ ಹಾಗೂ ಡಮ್ಮಿ ಖಾತೆಗಳಲ್ಲಿ ಬಂಧಿಸಿಟ್ಟು ಅನುದಾನವು ಸರ್ಕಾರದ ಉಪಯೋಗಕ್ಕೆ ಲಭ್ಯವಾಗದಿರುವ ಬಗ್ಗೆ ಮಂಡಿಸಿ ದಿನಾಂಕ 05.05.2016ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ವಿಷಯ ಸಂಖ್ಯೆ: C:218/2016 ರಲ್ಲಿ ಚರ್ಚಿಸಿತು.

ಸಚಿವ ಸಂಪುಟ ಟಿಪ್ಪಣಿಯ ಕಂಡಿಕೆ 11ರಲ್ಲಿ ಒಳಗೊಂಡಿರುವ ಅಂಶಗಳನ್ನು ಸಚಿವ ಸಂಪುಟವು ಸುದೀರ್ಘವಾಗಿ ಚರ್ಚಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಹಲವು ವರ್ಷಗಳಿಂದ ಅಕ್ರಮವಾಗಿ ಡಮ್ಮಿ ಖಾತೆ ಹಾಗೂ ಮುಖ್ಯ ವಾಹಿನಿಯಿಂದ ಹೊರಗೆ ಬಂಧಿಸಿಟ್ಟಿರುವ ಹಣವನ್ನು ರಾಜ್ಯ ಸರ್ಕಾರದ ಖಜಾನೆಗೆ ವರ್ಗಾಯಿಸಲು ನಿರ್ಧರಿಸಲಾಯಿತು. ಮುಂದುವರೆದು ಆರ್ಥಿಕ ಇಲಾಖೆಯು ಸದರಿ ಮೊತ್ತವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಖಜಾನೆ ಮೂಲಕ ಬಿಡುಗಡೆ ಮಾಡಲು ಸಚಿವ ಸಂಪುಟವು ನಿರ್ಧರಿಸಿತ್ತು. ಆದರೆ, ತದನಂತರ ಹೊರಡಿಸಲಾದ ಸಚಿವ ಸಂಪುಟ ಸಭಾ ನಡವಳಿ ಈ ಕೆಳಗಿನಂತೆ ಉಚ್ಚರಿಸಲಾಗಿದೆ.

> "ಸಚಿವ ಸಂಪುಟ ಟಿಪ್ಪಣಿಯ ಕಂಡಿಕೆ 11ರಲ್ಲಿ ಒಳಗೊಂಡಿರುವ ಅಂಶಗಳನ್ನು ಸಚಿವ ಸಂಪುಟವು ಸುದೀರ್ಘವಾಗಿ ಚರ್ಚಿಸಿತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬಳಸದೇ ಬಾಕಿ ಇರುವ ಅನುದಾನವನ್ನು ಆರ್ಥಿಕ ಇಲಾಖೆಗೆ ವರ್ಗಾಯಿಸಲು ಮತ್ತು ಆರ್ಥಿಕ ಇಲಾಖೆಯು ಸದರಿ ಮೊತ್ತವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಖಜಾನೆ ಮೂಲಕ ವ್ಯವಹರಿಸುವ ನಿಬಂಧನೆಗೊಳಪಟ್ಟು, ಬಿಡುಗಡೆ ಮಾಡಲು ಸಚಿವ ಸಂಪುಟವು ನಿರ್ಧರಿಸಿತು.
>
> ಮುಂದುವರೆದು ಸಚಿವ ಸಂಪುಟದ ಟಿಪ್ಪಣಿಯಲ್ಲಿ ನಮೂದಿಸಲಾದ ಇತರೆ ವಿಷಯಗಳ ಕುರಿತು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಅಧಿಕಾರಿಗಳ ಸಮಿತಿಯು ಸಲ್ಲಿಸಿರುವ ಪರಿಶೋಧನಾ ವರದಿಯ ಆಧಾರದ ಮೇಲೆ ಕ್ರಮ ಜರುಗಿಸಲು ಸಚಿವ ಸಂಪುಟವು ನಿರ್ಧರಿಸಿತು"

ಆದ್ದರಿಂದ ನಡವಳಿಯಲ್ಲಿ ನಾನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ಹಿನ್ನೆಲೆಯಲ್ಲಿ ಸೂಕ್ತ ತಿದ್ದುಪಡಿ ಮಾಡಲು ಕೋರುವೆ. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಡಮ್ಮಿ ಖಾತೆ ಎಂದು ನಮೂದಿಸಿದ್ದು ಬ್ಯಾಂಕಿನ ಕಾಗದಗಳನ್ನು ಈ ಪತ್ರದ ಜೊತೆಗೆ ಇರಿಸಿದೆ.

(ಎಚ್.ಕೆ ಪಾಟೀಲ)

**ಸರ್ಕಾರದ ಮುಖ್ಯ ಕಾರ್ಯದರ್ಶಿಗಳು**
ಕರ್ನಾಟಕ ಸರ್ಕಾರ
ವಿಧಾನಸೌಧ
ಬೆಂಗಳೂರು.